**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 16/10/20

## ಅಕ್ಷರದಾಸೋಹ ಧಾನ್ಯ ವಿತರಣೆ ಅವ್ಯವಸ್ಥೆ
# ಧಾನ್ಯ ಕೊಳೆಯುವ ಭೀತಿ

REALITY CHECK

**ಬೆಂಗಳೂರು:** ಕೊರೊನಾದಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಸರಕಾರ, ಒಂದೊಂದೇ ಯೋಜನೆಗೆ ಅರ್ಧಚಂದ್ರ ಪ್ರಯೋಗ ಮಾಡುತ್ತಿದೆ. ಮಧ್ಯಾಹ್ನದ ಬಿಸಿಯೂಟದ ಬದಲು ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವುದಾಗಿ ಘೋಷಿಸಿದ್ದ ಸರಕಾರ ಇದೀಗ ತನ್ನ ವಚನವನ್ನು ಮರೆತಿದೆ. ಎರಡು -ಮೂರು ತಿಂಗಳಿಗೆ ಸಾಕಾಗುವ ಧಾನ್ಯವಿದ್ದರೂ ಅದನ್ನು ವಿದ್ಯಾರ್ಥಿಗಳಿಗೆ ಕೊಡದೆ ಕಾಲ ದೂಡುತ್ತಿದೆ. ಅಕ್ಕಿ ಮತ್ತು ತೊಗರಿ ಹುಳಗಳಿಗೆ ಸುಗ್ಗಿಯಾಗಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಎಷ್ಟು ದಾಸ್ತಾನಿದೆ? ಹಂಚಿಕೆ ವ್ಯವಸ್ಥೆ ಹೇಗಿದೆ? ಅದರ ಸ್ವರೂಪ ಹೇಗಿದೆ ಎಂಬುದರತ್ತ ವಿಕ ನೋಟ.

**ಹೆಚ್ಚುವರಿ ಅಧಿಕಾರಿಯ ಸಮಸ್ಯೆ:** ರಾಯಚೂರು ಜಿಲ್ಲೆಯಲ್ಲಿ ಅಕ್ಷರ ದಾಸೋಹದ ದಾಸ್ತಾನಿದೆ. ನಿರಂತರ ಸುರಿಯುತ್ತಿರುವ ಮಳೆಯಿಂದ ಹಾಳಾಗುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯವಿದೆ ಎಂಬುದು ಅಧಿಕಾರಿಗಳಲ್ಲೇ ಸರಿಯಾದ ಮಾಹಿತಿಯಿಲ್ಲ. ಅಕ್ಷರ ದಾಸೋಹ ಯೋಜನೆಯ ಉಸ್ತುವಾರಿಯನ್ನು ಮೀನುಗಾರಿಕೆ ಇಲಾಖೆಯ ಹಿರಿಯ ಉಪ ನಿರ್ದೇಶಕರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ. ಇನ್ನು ಶಾಲೆಗಳಲ್ಲಿ ನಿಗದಿಪಡಿಸಿದಂತೆ ಮಕ್ಕಳ ಮನೆಗಳಿಗೆ ಆಹಾರ ಧಾನ್ಯ ತಲುಪಿಸುತ್ತಿಲ್ಲ. ಬದಲಿಗೆ ಪಾಲಕರನ್ನು ಶಾಲೆಗಳಿಗೆ ಕರೆಯಿಸಿ ಅವರಿಗೆ ನಿಗದಿಪಡಿಸಿದ ಆಹಾರ ಧಾನ್ಯ ವಿತರಿಸಲಾಗುತ್ತಿದೆ.

### ಅವ್ಯವಹಾರದ ವಾಸನೆ

ಶಿಕ್ಷಣ ಇಲಾಖೆಯಡಿ ಕಾರ್ಯ ನಿರ್ವಹಿಸುವ ಅಕ್ಷರ ದಾಸೋಹ ವಿಭಾಗದಿಂದ ಇಲ್ಲಿನ ವಿದ್ಯಾರ್ಥಿಗಳ ಬೇಡಿಕೆ ಆಧರಿಸಿ ಬೇಡಿಕೆ ಪಟ್ಟಿ ಕರ್ನಾಟಕ ರಾಜ್ಯ ಫುಡ್ ಕಾರ್ಪೊರೇಷನ್‌ಗೆ ಸಲ್ಲಿಕೆ ಆಗುತ್ತದೆ. ಅಲ್ಲಿಂದ ಇಲಾಖೆಗಳ ನಡುವೆ ಚರ್ಚೆಯಾಗಿ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದ ನಂತರ ಗುತ್ತಿಗೆದಾರರು ಧಾನ್ಯ ಸರಬರಾಜು ಮಾಡುತ್ತಾರೆ. ಆದರೆ, ಈ ಎರಡು ತಿಂಗಳ ಧಾನ್ಯ ಪೂರೈಕೆಯಲ್ಲಿ ಈ ಯಾವ ಪ್ರಕ್ರಿಯೆಗಳು ಸರಿಯಾಗಿ ನಡೆಸದೆ ಗುತ್ತಿಗೆದಾರ ಸರಬರಾಜು ಮಾಡಿರುವುದರಿಂದ ಹಂಚಿಕೆ ತಡೆ ಹಿಡಿಯಲಾಗಿದೆ. ಇದರಲ್ಲಿ ಅವ್ಯವಹಾರದ ವಾಸನೆ ಕಂಡು ಬರುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ.

ಜಿಲ್ಲಾವಾರು ನೋಟ

### ತಕ್ಷಣ ಹಂಚದಿದ್ದರೆ ಹಾಳು

**ವಿಜಯಪುರ:** ಒಂದೂವರೆ ತಿಂಗಳಿಂದ 9100 ಕ್ವಿಂಟಾಲ್ ಧಾನ್ಯ ಉಗ್ರಾಣದಲ್ಲಿದೆ. ತಕ್ಷಣ ಹಂಚದಿದ್ದರೆ ಹಾಳಾಗುತ್ತದೆ. 3 ತಿಂಗಳ ಧವಸ ಧಾನ್ಯ ಉಗ್ರಾಣ ಹಾಗೂ ಶಾಲೆಗಳಲ್ಲಿದೆ. ಸದ್ಯ ಜಿಲ್ಲೆಯಲ್ಲಿ ಅತಿಯಾದ ಮಳೆಯಿಂದಾಗಿ ಶಾಲೆಗಳು ಸೋರುತ್ತಿದ್ದು ಧಾನ್ಯ ಕೊಳೆಯುತ್ತಿದೆ.

### ಅಕ್ಕಿ ಮಾತ್ರ ಬಂದಿದೆ

**ಉ.ಕನ್ನಡ:** ಉತ್ತರ ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಕೊಡಬೇಕಾದ ಸಾಮಗ್ರಿಗಳ ಪೈಕಿ ಅಕ್ಕಿ ಮಾತ್ರ ಕೆಎಸ್‌ಎಫ್‌ಸಿ ಗೋಡೌನ್‌ನಲ್ಲಿ ಸಂಗ್ರಹವಾಗಿ ಉಳಿದುಕೊಂಡಿದೆ. ಬೇಳೆ, ಎಣ್ಣೆಗಳಿಲ್ಲ.

### ವಿತರಣೆ ಆದೇಶ ಬಂದಿಲ್ಲ

**ಬೆಳಗಾವಿ:** ಜಿಲ್ಲೆಯ ಉಗ್ರಾಣದಲ್ಲಿ 48,757 ಕ್ವಿಂಟಾಲ್ ಅಕ್ಕಿ, 9,172 ಕ್ವಿಂಟಾಲ್ ಗೋಧಿ ಮತ್ತು 5976 ಕ್ವಿಂಟಾಲ್ ತೊಗರಿ ಬೇಳೆ ಸಂಗ್ರಹವಿದೆ. ತಿಂಗಳ ಹಿಂದಷ್ಟೆ ಎಲ್ಲ ಧಾನ್ಯಗಳು ಜಿಲ್ಲೆಯ ಉಗ್ರಾಣಕ್ಕೆ ಬಂದಿರುವುದರಿಂದ ಹಾಳಾಗಿರುವ ಸಾಧ್ಯತೆ ಕಡಿಮೆ.

### ತೊಗರಿಬೇಳೆ ಬೇಕು

**ಹಾವೇರಿ:** ತೊಗರಿ ಬೇಳೆ 7600 ಕ್ವಿಂಟಾಲ್ ಬೇಡಿಕೆ ಇದ್ದು, ಸದ್ಯ 4032 ಕ್ವಿಂಟಲ್ ದಾಸ್ತಾನು ಗೋದಾಮಿನಲ್ಲಿದೆ. ಇನ್ನೂ 3568 ಕ್ವಿಂಟಾಲ್ ತೊಗರಿ ಬೆಳೆಯನ್ನು ಸರಕಾರ ಬಿಡುಗಡೆ ಮಾಡಬೇಕಾಗಿದೆ. 16403 ಕ್ವಿಂಟಲ್‌ನಷ್ಟು ಅಕ್ಕಿ ಗೋಧಿ ದಾಸ್ತಾನು ಉಗ್ರಾಣದಲ್ಲಿದೆ.